


## 'ಜಯಮ್ಮನ ಮಗ'ನ ಜೈತ್ರಯಾತ್ರೆ!

ವಿಜಯ್ ಸೀಮೋಲ್ಲಂಘನದ ರೋಮಾಂಚನದಲ್ಲಿ ಇದ್ದಾರೆ. ಸಂಕ್ರಾಂತಿ ಸಂದರ್ಭದಲ್ಲಿ ಬಂದಿರುವ ತ್ರಿಭಾಷಾ ಚಿತ್ರದಲ್ಲಿ ನಟಿಸುವ ಆಹ್ವಾನ ಅವರಿಗೆ ಹುಗ್ಗಿಯುಂಡಷ್ಟು ಖುಷಿ ಕೊಟ್ಟಿದೆ. ತಮಿಳಿನ ಗಣೇಶ್ ಕಾಮರಾಜನ್ ನಿರ್ಮಾಣದ, ಇನ್ನೂ ಸೆಟ್ಟೇರಬೇಕಿರುವ ಚಿತ್ರದ ಇಬ್ಬರು ನಾಯಕರಲ್ಲಿ ವಿಜಯ್ ಒಬ್ಬರು. ಮತ್ತೊಬ್ಬ ನಾಯಕನ ಆಯ್ಕೆ ಇನ್ನೂ ಮುಗಿದಿಲ್ಲ.

ಕನ್ನಡ, ತಮಿಳು ಹಾಗೂ ಮಲೆಯಾಳಂಗಳಲ್ಲಿ ವಿಜಯ್ ಚಿತ್ರ ರೂಪುಗೊಳ್ಳಲಿದೆ. ತಮಿಳು ಹಾಗೂ ಮಲೆಯಾಳಂ ಚಿತ್ರಗಳಿಗೂ ವಿಜಯ್ ಅವರೇ ಧ್ವನಿ ನೀಡಲಿದ್ದಾರೆ. 'ಕನ್ನಡಮ್ಮನ ಆಣೆ, ಮೂರೂ ಭಾಷೆಯ ಚಿತ್ರಗಳಿಗೆ ನ್ಯಾಯ ಸಲ್ಲಿಸುವೆ' ಎನ್ನುವುದು ಅವರ ಆತ್ಮವಿಶ್ವಾಸದ ಮಾತು. ಅವರ ವರ್ಚಸ್ಸಿಗೆ ತಕ್ಕಂತಹ ಭೂಗತ ಲೋಕದ ಕಥೆ ಚಿತ್ರದಲ್ಲಿರುವುದು ಕೂಡ ವಿಜಯ್ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಅಂದಹಾಗೆ, ಈ ಸಿನಿಮಾದ ಆಹ್ವಾನ ಬಂದಾಗ ವಿಜಯ್ ಅವರಿಗೆ ಮೊದಲು 'ಶಾಕ್' ಆಯಿತಂತೆ.

ವಿದೇಶದಲ್ಲಿ ಹೆಚ್ಚಿನ ಭಾಗದ ಚಿತ್ರೀಕರಣ ನಡೆಸುವ ಚಿತ್ರಕ್ಕೆ 20 ಕೋಟಿ ರೂಪಾಯಿ ಬಜೆಟ್ಟನ್ನು ನಿರ್ಮಾಪಕರು ಗೊತ್ತುಪಡಿಸಿದ್ದಾರೆ. ಅರವಿಂದನ್ ನಾಗರಾಜ್ ಈ ಚಿತ್ರದ ನಿರ್ದೇಶಕರು.

ಒಂದೆಡೆ ತ್ರಿಭಾಷಾ ಚಿತ್ರದ ಸಂಭ್ರಮವಾದರೆ, ಇನ್ನೊಂದೆಡೆ 'ರಜನಿಕಾಂತ' ಚಿತ್ರ ತೆರೆಕಾಣಲು ಸಿದ್ಧತೆ ನಡೆಸಿದೆ. ಈ ಚಿತ್ರದಲ್ಲಿ ವಿಜಯ್ ದ್ವಿಪಾತ್ರದಲ್ಲಿ ನಟಿಸಿದ್ದಾರೆ. ಸೀಳು ತುಟಿಯ ರಜನಿಯ ಪಾತ್ರ ಅವರಿಗೆ ಸವಾಲೆನ್ನಿಸಿದೆ. ಈ ಪಾತ್ರಕ್ಕಾಗಿ ಅವರು ಧ್ವನಿ ಬದಲಾವಣೆ ಕೂಡ ಮಾಡಿಕೊಂಡಿದ್ದಾರೆ. 'ರಜನಿಕಾಂತ ಒಂದು ಒಳ್ಳೆಯ ಕಮರ್ಷಿಯಲ್ ಸಿನಿಮಾ. ಫ್ಯಾಮಿಲಿ ಆಡಿಯನ್ಸ್‌ಗೆ ಹೇಳಿ ಮಾಡಿಸಿದ ಚಿತ್ರ' ಎನ್ನುವುದು ವಿಜಯ್ ನೀಡುವ ಭರವಸೆ.

ವಿಜಯ್ ನಟನೆಯ 'ಜಯಮ್ಮನ ಮಗ' ಚಿತ್ರ ಇನ್ನೇನು ಚಿತ್ರೀಕರಣ ಮುಗಿಸುವ ಹಂತದಲ್ಲಿದೆ. ಈ ಸಿನಿಮಾದ ನಿರ್ಮಾಣ ಕೂಡ ಅವರದೇ. 2013 ತಮ್ಮ ಪಾಲಿಗೆ, ಅಭಿಮಾನಿಗಳ ಪಾಲಿಗೆ ಹಬ್ಬವಾಗಲಿದೆ ಎನ್ನುವುದು ವಿಜಯ್ ನಿರೀಕ್ಷೆ.

## ರೂಪಾಂತರದ 'ಸಿಲ್ಕ್'

ವೀಣಾ ಮಲ್ಲಿಕ್ ಅವರನ್ನು ಗಾಂಧಿನಗರಕ್ಕೆ ಕರೆತಂದಿರುವ ನಿರ್ದೇಶಕ ತ್ರಿಶೂಲ್ ಈಗ ತಮ್ಮ 'ಡರ್ಟಿ' ಸಿನಿಮಾ ಚಿತ್ರೀಕರಣದ ಕೊನೆಯ ಹಂತದಲ್ಲಿದ್ದಾರೆ. ಬಾಕಿಯಿರುವ ಗೀತೆಯೊಂದರ ಶೂಟಿಂಗ್ ಹೊರತುಪಡಿಸಿದರೆ ಉಳಿದ ಚಿತ್ರೀಕರಣ ಈಗಾಗಲೇ ಮುಗಿದಿದೆ. ಫೆಬ್ರುವರಿಯಲ್ಲಿ ಸಿನಿಮಾ ತೆರೆಕಾಣಿಸುವ ಪ್ರಯತ್ನ ನಿರ್ದೇಶಕರದ್ದು. ತಮ್ಮ ಸಿನಿಮಾದಲ್ಲಿ ಪ್ರಣಯದ ಕಾವಿಗೂ 'ಪ್ರೇಮಿಗಳ ದಿನ'ದ ಸಂದರ್ಭಕ್ಕೂ ತಾಳೆಯಾಗಬಹುದು ಎನ್ನುವ ಲೆಕ್ಕಾಚಾರವೂ ಅವರಿಗಿದೆ.

ಅಂದಹಾಗೆ, 'ಡರ್ಟಿ ಪಿಕ್ಚರ್'ನ ಹೆಸರು ಇದೀಗ 'ಸಿಲ್ಕ್' ಎಂದಾಗಿದೆ. 'ಡರ್ಟಿ ಪಿಕ್ಚರ್' ಹೆಸರಿನ ಚಿತ್ರ ಈಗಾಗಲೇ ಬಾಲಿವುಡ್‌ನಲ್ಲಿ ಇರುವುದರಿಂದ, ಅದೇ ಹೆಸರನ್ನು ಕನ್ನಡ ಸಿನಿಮಾಕ್ಕೆ ಬಳಸಿಕೊಳ್ಳದಿರಲು ನ್ಯಾಯಾಲಯ ಸೂಚಿಸಿದೆ. ಹಾಗಾಗಿ, 'ಸಿಲ್ಕ್' ಹೆಸರಿಗೆ ತೃಪ್ತಿ ಪಟ್ಟಿರುವ ತ್ರಿಶೂಲ್, 'ಸಕ್ಕತ್ ಹಾಟ್' ಎನ್ನುವ ಅಡಿಶೀರ್ಷಿಕೆ ಬಳಸಿಕೊಂಡಿದ್ದಾರೆ.

ಹಾಟ್ ದೃಶ್ಯಗಳ ಮನರಂಜನೆ ಜೊತೆಗೆ ಭಾವುಕ ಸನ್ನಿವೇಶಗಳೂ 'ಸಿಲ್ಕ್'ನಲ್ಲಿವೆ ಎನ್ನುವುದು ತ್ರಿಶೂಲ್ ಸ್ಪಷ್ಟನೆ. ಚಿತ್ರದ ನಿರ್ಮಾಪಕರಾದ ವೆಂಕಟಪ್ಪನವರ ಪುತ್ರ ಅಕ್ಷಯ್ ನಾಯಕ ನಟನಾಗಿರುವುದರಿಂದ, ಸಿನಿಮಾದ ಬಗ್ಗೆ ತ್ರಿಶೂಲ್ ಹೆಚ್ಚು ನಿಗಾ ವಹಿಸಿದ್ದಾರೆ. ಜೆಸ್ಸಿ ಗಿಫ್ಟ್ ಸಂಗೀತ, ಜೈ ಆನಂದ್ ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು

